
# ಸಂತೆಯೆಂಬ ಪುಟ್ಟ ಪ್ರಪಂಚದೊಳಗೆ...

ಯುಗಾದಿ ಪ್ರಬಂಧ ಸ್ಪರ್ಧೆ 2025

ತೀರ್ಪುಗಾರರು ಮೆಚ್ಚಿದ ಪ್ರಬಂಧ

◆ ಸಂಜೋತಾ ಪುರೋಹಿತ್

ಕಲೆ: ರಾಮಕೃಷ್ಣ ಸಿದ್ರಪಾಲ



ಸಂತೆಯೆಂದರೆ ಕಡುನೀಲಿ ಮೋಹವಿದೆ ನನಗೆ. ಕಡುನೀಲಿ ಎಂದರೆ ಸಮುದ್ರದ ನೀಲಿಯಂತೆ ಎಂದಿಗೂ ಮುಗಿಯದ, ಚಾಚಿದಷ್ಟು ವಿಸ್ತಾರಗೊಳ್ಳುವ, ಅಲೆಗಳಂತೆ ಮತ್ತೆ ಮತ್ತೆ ಮನದ ತೀರಕ್ಕೆ ಅಪ್ಪಳಿಸುವ ಮೋಹ. ಅಲ್ಲಿ ಕಾಣಸುವಷ್ಟು ಬದುಕು ಮತ್ತು ಭಾವನೆಗಳು ಇನ್ನೆಲ್ಲೂ ಕಾಣಸುವುದಿಲ್ಲ ಎನ್ನಿಸುತ್ತದೆ. ಇಷ್ಟು ವರ್ಷಗಳ ನಂತರವೂ, ದೇಶ ವಿದೇಶಗಳನ್ನು ಸುತ್ತಿದ ಮೇಲೂ ಸಂತೆಯೆಂದರೆ ಮನ ನವಿರಾಗುತ್ತದಲ್ಲ, ಅದಕ್ಕೆ ಮುಖ್ಯ ಕಾರಣವೇನಿರಬಹುದು ಎಂದೀಗ ಯೋಚಿಸುತ್ತಿದ್ದೇನೆ. ಗುರುವಾರದ ದಿನಗಳಲ್ಲಿ ಬೆಳಗಿನಿಂದ ಖಾಲಿ ಹೊಡೆಯುತ್ತಿದ್ದ ಬೀದಿಗಳು ಮಧ್ಯಾಹ್ನದ ನಾಲ್ಕು ಗಂಟೆಯ ಹೊತ್ತಿಗೆ ನಿದ್ದೆಯಿಂದ ಎದ್ದು ಸಣ್ಣಗೆ ಪಿಸುಗುಡತೊಡಗಿ ನೋಡನೋಡುತ್ತಿದ್ದಂತೆಯೇ ಓಣಿಯಲ್ಲಿ ಜನರು ಅತ್ತಿಂದಿತ್ತ ಸರಭರ ಓಡಾಡಲು ಶುರು ಮಾಡಿದಾಗ ಅಲ್ಲಿ ದೂರದಲ್ಲಿ ಸಂತೆ ಓಣಿಯಲ್ಲಿ ಸಂತೆಯ ಗೌಜು ಶುರುವಾಗಿದೆಯೆಂದೇ ಲೆಕ್ಕ. ಹಿಂದಿನ ದಿನವೇ ಅಜ್ಜ ಒಂದೆರಡು ಗುಟ್ಕಾ ಚೀಲಗಳನ್ನು, ಇನ್ನೊಂದೆರಡು ವೈರಿನಿಂದ ಹೆಣೆದ ಚೀಲಗಳನ್ನು ಸಿದ್ಧಪಡಿಸಿ ಇಟ್ಟುಕೊಳ್ಳುತ್ತಿದ್ದ. ಅವಸರದಲ್ಲಿ ಚಹಾ ಕುಡಿದವನೇ ಸೈಕಲ್ಲಿಗೆ ಖಾಲಿ ಚೀಲಗಳನ್ನು ಸಿಕ್ಕಿಸಿಕೊಂಡು ಹೊರಡುತ್ತಿದ್ದ. ಶಾಲೆಗೆ ರಜೆಯಿದ್ದರೆ ನಾನು ಅವನೊಂದಿಗೆ ಹೋಗುತ್ತಿದ್ದೆ. ಅವನ ಹಿಂದೆ ಹಿಂದೆ ಹೋಗುವುದು, ಅವನು ಚೌಕಾಸಿ ಮಾಡಿ ಮುಗಿಸುವವರೆಗೂ ಕೈಯಲ್ಲಿ ಚೀಲ ಹಿಡಿದುಕೊಂಡು ಕಾಯುವುದು, ಚಿತಾವಣೆ ಮುಗಿದು ತಕ್ಕಡಿಯಲ್ಲಿ ತೂಗಿದ ತರಕಾರಿಗಳನ್ನು ಚೀಲದಲ್ಲಿ ಹಾಕಿಸಿಕೊಳ್ಳುವುದು, ಮೇಲೆ ಇನ್ನೊಂದೆರಡು ಹಾಕು ಎಂದು ಅಜ್ಜ ಹೇಳಿದಾಗ ಅವರು ಹಾಕುವರೇನೋ ಎಂದು ಕಾಯುವುದು, ಅಂಗಿಯ ಒಳಗಿದ್ದ ಬನಿಯನ್ನಿನ ಕಿಸೆಯೊಳಗಿಂದ ನಿಧಾನವಾಗಿ ದುಡ್ಡು ತೆಗೆದು ಎಣಿಸಿಕೊಡುವವರೆಗೂ ಅತ್ತಿತ್ತ ನೋಡುತ್ತ ನಿಲ್ಲುವುದು. ಇದಿಷ್ಟು ನನ್ನ ಕೆಲಸ.

ಸಂತೆಯೆಂಬ ಪುಟ್ಟ ಪ್ರಪಂಚದೊಳಗೆ ಒಂದು ಸುತ್ತು ಹಾದು ಬಂದರೆ ಸಾಕು, ತುಂಬಿರುವ ಚೀಲಗಳ ಜೊತೆಯಲ್ಲಿ ಮನಸ್ಸು ಸಹ ತುಂಬಿರುತ್ತದೆ. ಎಷ್ಟೋ ದಿನಗಳ ನಂತರ ಅಪರೂಪಕ್ಕೆ ಸಿಕ್ಕವರು, ಸಂತೆಯಲ್ಲಿ ಸಿಗುತ್ತೇನೆ ಎಂದು ಮಾತು ಕೊಟ್ಟು ಅದರಂತೆ ತಪ್ಪದೇ ಬಂದು ಭೇಟಿಯಾಗುವವರು, ಅವರನ್ನು ಕಂಡಾಗ ಜಗತ್ತನ್ನೇ ಮರೆತವರಂತೆ ಹರಟೆ ಹೊಡೆಯುವ ಸುಖ. ತರಕಾರಿ ಮಾರುವವರ ಜೊತೆಯಲ್ಲಿ ಚೌಕಾಸಿ ಮಾಡುತ್ತಲೇ ಅವರ ಮನೆಯವರ ಬಗ್ಗೆ ಕೇಳುತ್ತ ಸುಖದುಃಖ ಹಂಚಿಕೊಳ್ಳುವ ಮನುಷ್ಯರ ನಡುವಿನ ಬಾಂಧವ್ಯ. ಸ್ನೇಹಿತನ ಜೊತೆಯಲ್ಲಿ ಹರಟೆ ಹೊಡೆಯುತ್ತ ಹೆಂಡತಿ ಹೇಳಿದ ಸೊಪ್ಪನ್ನು ತರದೆ ಮನೆಯಲ್ಲಿ ಬೈಸಿಕೊಳ್ಳುವ ಮತ್ತು ಮುಂದಿನ ವಾರದ ಸಂತೆಯಲ್ಲಿ ತಪ್ಪದೇ ತರುತ್ತೇನೆ ಎಂದು ಹೇಳಿ ಮಾತು ಕೊಟ್ಟು ಮನ್ನಿಸುವ ಮುದ್ದಣ ಮನೋರಮೆಯ ಸಾಂಗತ್ಯ. ಎದುರಾಗುವ ಪರಿಚಿತರನ್ನೆಲ್ಲ ಮಾತನಾಡಿಸುತ್ತ ಅಪರಿಚಿತರನ್ನು ನೋಡಿ ಪರಿಚಯ ಮಾಡಿಕೊಳ್ಳಲು ಯತ್ನಿಸುತ್ತ ಇಡೀ ಹಳ್ಳಿಯೇ ಸರಪಳಿಯಂತೆ ಬೆಸೆದುಕೊಂಡಿರುವ ಆತ್ಮೀಯತೆ. ಮಗ ಕೇಳುತ್ತಿರುವ ಐಸ್‌ಕ್ರೀಂ ಕೊಡಿಸಲು ತನ್ನ ಜಂಪರಿನಲ್ಲಿ ಸಿಕ್ಕಿಸಿಕೊಂಡಿರುವ ಪರ್ಸನ್ನು ಮತ್ತೆ ಮತ್ತೆ ತೆಗೆದು ನೋಡಿ ಹಣ ಎಣಿಸುತ್ತಿರುವ ಹೆಂಗಸು. ಹೀಗೆ ನೂರಾರು ಕಥೆಗಳು, ಪ್ರಸಂಗಗಳು ಏಕಕಾಲಕ್ಕೆ ಜರುಗುವ ತಾಣ ಸಂತೆ.

ನಮ್ಮಜ್ಜನ ಊರಿನ ಸಂತೆ ಬೇಸಿಗೆ ಕಾಲದಲ್ಲಿ ಮಧ್ಯಾಹ್ನ ಎರಡರಿಂದಲೇ ಸಣ್ಣಗೆ ಶುರುವಾಗುತ್ತಿತ್ತು. ಪಕ್ಕದೂರಿನಿಂದ ತರಕಾರಿ ಇತ್ಯಾದಿಗಳನ್ನು ಮಾರಲು ಬರುವ ಜನ ತಮ್ಮ ನಿಗದಿತ ಜಾಗಗಳಲ್ಲಿ ಹಾಸು ಹಾಸಿ, ತರಕಾರಿಯನ್ನು ಒಂದರ ಮೇಲೊಂದರಂತೆ ಪೇರಿಸಿಟ್ಟುಕೊಂಡು ಐದು ರೂಪಾಯಿಗೊಂದು ಗುಂಪು, ಹತ್ತು ರೂಪಾಯಿಗೊಂದು ಗುಂಪು, ಕೊಳೆತಂತಹವನ್ನು ಎರಡು ರೂಪಾಯಿ ಎಂದೆಲ್ಲ ವಿಭಜಿಸಿಟ್ಟು